2. ಕಾನೂನು ಇಲಾಖೆಯ ಅಡಿಯಲ್ಲಿ ಇದ್ದಾಗ ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆಯ ಕಾರ್ಯವನ್ನು ನಿರ್ವಹಿಸುತ್ತಿದ್ದ ಪ್ರಾರೂಪಣಾ ವಿಭಾಗವನ್ನೇ ಹಾಗೂ ಆ ದಿನ ಇದ್ದ ಅಧಿಕಾರಿ ಮತ್ತು ಸಿಬ್ಬಂದಿ ವರ್ಗದವರನ್ನೇ ಪ್ರತ್ಯೇಕಿಸಿ ಈ ಇಲಾಖೆಯನ್ನು ಅಸ್ತಿತ್ವಗೊಳಿಸಲಾಗಿದೆ. ಇಂತಹ ಕಾರ್ಯ ನಿರ್ವಹಿಸಲು ಹೊಸದಾಗಿ ಸಿಬ್ಬಂದಿಯನ್ನು ಪ್ರತ್ಯೇಕವಾಗಿ ಒದಗಿಸಿರುವುದಿಲ್ಲ.

3. ಸಮನ್ವಯ ಕಾರ್ಯಕ್ಕೆ ಹೆಚ್ಚಿನ ಸಿಬ್ಬಂದಿಯ ಅಗತ್ಯವಿರುವುದಿಲ್ಲ.

ಹುಬ್ಬಳ್ಳಿ- ಧಾರವಾಡ ಮಹಾನಗರದ ಬೀಡಿ ಕಾರ್ಮಿರಕ ಕನಿಷ್ಠ ಕೂಲಿ ಮತ್ತು ನಿವೇಶನ

1261 (1512) ಶ್ರೀ ಹೊನ್ನಳ್ಳಿ ಜಬ್ಬಾರ್ ಖಾನ್ ಹೈಯತ್ ಖಾನ್ (ಹುಬ್ಬಳ್ಳಿ) : ಮಾನ್ಯ ಕಾರ್ಮಿಕ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಹುಬ್ಬಳ್ಳಿ- ಧಾರವಾಡ ಮಹಾನಗರಗಳಲ್ಲಿ ಬೀಡಿ ಕಾರ್ಮಿಕರನ್ನು ಸಮೀಕ್ಷೆ ನಡೆಸಿ ಗುರುತಿಸಲಾಗಿದೆಯೆ?

ಆ) ಹಾಗಿದ್ದಲ್ಲಿ, ಅವರುಗಳ ಸಂಖ್ಯೆ ಎಷ್ಟು? ಇವರಿಗೆ ಮನೆ, ನಿವೇಶನಗಳನ್ನು ಸರ್ಕಾರ ಒದಗಿಸಲು ಹಾಕಿಕೊಂಡಿರುವ ಯೋಜನೆಗಳಾವುವು?

ಇ) ಬೀಡಿ ಕಾರ್ಮಿಕರಿಗೆ ಕನಿಷ್ಠ ಕೂಲಿಯನ್ನು ನಿಗಧಿಪಡಿಸಲಾಗಿದೆಯೆ? ನಿಗಧಿಪಡಿಸಿದಲ್ಲಿ, ಕೂಲಿ ಎಷ್ಟು?

ಈ) ಈಗ ನಿಗಧಿಪಡಿಸಿರುವ ಕೂಲಿಯನ್ನು ಎಂದಿನಿಂದ ಪುನರ್ ವಿಮರ್ಶಿಸಲಾಗುವುದು?

ಉ) ಪುನರ್ ವಿಮರ್ಶಿಸುವ ದಿನಾಂಕ ಮುಗಿದಿದ್ದರೆ ಸರ್ಕಾರ ಪುನಃ ಯಾವಾಗ ಪುನರ್ ನಿಗಧಿಪಡಿಸುವುದು.

ಶ್ರೀ ಎ.ಎಂ. ಹಿಂಡಸಗೇರಿ (ಕಾರ್ಮಿಕ ಮತ್ತು ವಕ್ಫ್ ಸಚಿವರು) :

ಅ) ಹೌದು

ಆ) 1080, ಬೀಡಿ ಕಾರ್ಮಿಕರಿಗೆ ವಸತಿ ಒದಗಿಸುವ ಯೋಜನೆ ಕೇಂದ್ರ ಸರ್ಕಾರದ ಯೋಜನೆಯಾಗಿರುತ್ತದೆ. ರಾಜ್ಯದಲ್ಲಿ ಇವರುಗಳಿಗೆ ಯಾವುದೇ ಪ್ರತ್ಯೇಕ ಯೋಜನೆಗಳು ಇರುವುದಿಲ್ಲ.

ಇ) ಹೌದು. ಪ್ರತಿ ಸಾವಿ ಬೀಡಿ ಸುತ್ತಲು ನಿಗಧಿ ಪಡಿಸಿರುವ ಕನಿಷ್ಠ ವೇತನ

ಮೂಲ ವೇತನ	ರೂ. 36. 85
ತುಟ್ಟಿಭತ್ಯೆ	ರೂ. 21. 33

ಒಟ್ಟು	**ರೂ. 58. 18**

ಈ) ಕನಿಷ್ಠ ವೇತನವನ್ನು ಪ್ರತಿ ಐದು ವರ್ಷಕ್ಕೊಮ್ಮೆ ಪುನರ್ ಪರಿಶೀಲಿಸಲು ಅವಕಾಶವಿರುತ್ತದೆ. ಈ ಹಿಂದೆ ಅಕ್ಟೋಬರ್ 1996ರಂದು ವೇತನವನ್ನು ಪರಿಷ್ಕರಿಸಿದ್ದು, ಪುನಃ 2001ರ ವೇಳೆಗೆ ವೇತನವನ್ನು ಪರಿಷ್ಕರಿಸಬೇಕಾಗುತ್ತದೆ.

ಉ) ಮೇಲಿನ ಉತ್ತರ ಅನ್ವಯಿಸುತ್ತದೆ.

ಬಾಲ ಕಾರ್ಮಿಕರ ಶಿಕ್ಷಣಕ್ಕಾಗಿ ಬಿಡುಗಡೆಯಾದ ಹಣ

1264 (1514) ಶ್ರೀ ಹೊನ್ನಳ್ಳಿ ಜಬ್ಬಾರ್ ಖಾನ್ ಹೈಯತ್ ಖಾನ್ (ಹುಬ್ಬಳ್ಳಿ) : ಮಾನ್ಯ ಕಾರ್ಮಿಕ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದ ಬಾಲ ಕಾರ್ಮಿಕರ ಶಿಕ್ಷಣಕ್ಕಾಗಿ ಕೇಂದ್ರ ಸರ್ಕಾರದಿಂದ ಕಳೆದ ಮೂರು ವರ್ಷಗಳಲ್ಲಿ ಬಿಡುಗಡೆಯಾದ ಹಣವೆಷ್ಟು?

ಆ) ಈ ಬಿಡುಗಡೆಯಾದ ಹಣವನ್ನು ಪೂರ್ಣವಾಗಿ ಉಪಯೋಗಿಸಿಕೊಳ್ಳಲಾಗಿದೆಯೇ;

ಇ) ಇಲ್ಲದಿದ್ದಲ್ಲಿ ಕಾರಣಗಳೇನು?

ಶ್ರೀ ಎ.ಎಂ. ಹಿಂಡಸಗೇರಿ (ಕಾರ್ಮಿಕ ಮತ್ತು ವಕ್ಫ್ ಸಚಿವರು) :

ಅ) ರಾಷ್ಟ್ರೀಯ ಬಾಲ ಕಾರ್ಮಿಕ ಯೋಜನೆ ಅಡಿಯಲ್ಲಿ ಬಾಲ ಕಾರ್ಮಿಕ ಶಿಕ್ಷಣಕ್ಕಾಗಿ ಕೇಂದ್ರ ಸರ್ಕಾರದಿಂದ ಕಳೆದ ಮೂರು ವರ್ಷಗಳಲ್ಲಿ ಕೆಳಕಂಡ ಮೂರು ಜಿಲ್ಲೆಗಳಿಗೆ ಮಾತ್ರ ಹಣ ಬಿಡುಗಡೆಯಾಗಿದ್ದು ವಿವರಗಳು ಕೆಳಕಂಡಂತೆ ಇದೆ.

	ಜಿಲ್ಲೆಗಳು	ಬಿಡುಗಡೆಯಾದ ಮೊತ್ತ
1.	ಬಿಜಾಪುರ ಜಿಲ್ಲೆ	ರೂ. 31, 53, 500-00
2.	ರಾಯಚೂರು ಜಿಲ್ಲೆ	ರೂ. 33, 72, 884-00
3.	ಧಾರವಾಡ ಜಿಲ್ಲೆ	ರೂ. 25, 84, 000-00

ಆ) ಬಿಜಾಪುರ ಮತ್ತು ರಾಯಚೂರು ಜಿಲ್ಲೆಯ ಜಿಲ್ಲಾಧಿಕಾರಿಗಳು ಬಾಲ ಕಾರ್ಮಿಕರ ಶಿಕ್ಷಣಕ್ಕಾಗಿ ಶೇಕಡ 90 ಭಾಗ ಆರ್ಥಿಕ ಸಹಾಯವನ್ನು ಉಪಯೋಗಿಸಿ ಕೊಂಡಿರುತ್ತಾರೆ. ಧಾರವಾಡ ಜಿಲ್ಲೆಯ ಜಿಲ್ಲಾಧಿಕಾರಿಗಳು ಬಿಡುಗಡೆಯಾದ ಆರ್ಥಿಕ ಸಹಾಯವನ್ನು ಹೊಸದಾಗಿ ಕಾರ್ಯ ಆರಂಭಗೊಂಡಿರುವ ಗದಗ ಜಿಲ್ಲೆ ಮತ್ತು ಹಾವೇರಿ ಜಿಲ್ಲೆ ಜಿಲ್ಲಾಧಿಕಾರಿಗಳಿಗೆ ವಿಶೇಷ ಶಾಲೆಗಳನ್ನು ತೆರೆಯಲು ಸಮಾನ ಅವಕಾಶ ನೀಡಿದ್ದು ಹಂತ ಹಂತವಾಗಿ ಸದರಿ ಆರ್ಥಿಕ ಸಹಾಯವನ್ನು ಉಪಯೋಗಿಸಿಕೊಳ್ಳಲಾಗುತ್ತಿದೆ.

ಇ) ಉದ್ಭವಿಸುವುದಿಲ್ಲ.

ಬಸವಕಲ್ಯಾಣದಲ್ಲಿರುವ ಪ್ರಮುಖ ಸ್ಥಳಗಳ ದುಸ್ಥಿತಿ

1266 (1501) ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?